
ಅಳುಕು, ಅಪರಾಧೀ ಮನೋಭಾವಗಳು ಕೂಡ ಸಹಜವಾದ ಭಾವನೆಗಳಲ್ಲ. ಅವು ಒಂದು ಬಗೆಯ ಉಳಿವಿನ ಆಟದಲ್ಲಿ ಗೆಲ್ಲಲೇಬೇಕಾದ ಅನಿವಾರ್ಯತೆ ಹಾಗೂ ಗೆದ್ದು ಬದುಕಬೇಕಾದ ಅನಿವಾರ್ಯತೆಗಳನ್ನು ವಿಜೃಂಭಿಸುವಂಥದ್ದು. ಕಡೆಗೆ ತನ್ನ ಸೈಟೊಂದನ್ನು ಬಹುರಾಷ್ಟ್ರೀಯ ಕಂಪನಿ ಅತ್ಯಧಿಕ ಮೊತ್ತಕ್ಕೆ ಖರೀದಿಸುವ ಆಯ್ಕೆ ಇತ್ತಾಗ ಹಣದ ಲೆಕ್ಕಾಚಾರವೇ ಮುಖ್ಯವಾಗುತ್ತದೆ. ಬಹುಶಃ ಈ ಕಥೆಯಂತೆಯೇ ಇರುವ ಇನ್ನೊಂದು ಕಥೆ, ‘ಸಾವು’. ಕೆಲಸದ ಒತ್ತಡದ ನೆಪದಿಂದಲೇ ತನ್ನ ತಂದೆ ಸತ್ತಿದ್ದು ಎನ್ನುವುದು ಅರಿತಿರುವ ಮಗ, ಅಪ್ಪನ ಆಸೆಯಂತೆ ಹಳ್ಳಿಗೆ ಒಯ್ದು ಮಣ್ಣು ಮಾಡದೇ ಹೋಗುತ್ತಾನೆ. ಮೂರು ದಿನಕ್ಕೆ ಮತ್ತೆ ಹಳ್ಳಿಗೆ ಹೋಗಿ ಕಾರ್ಯ ಮಾಡಲು ಅವನಿಗೆ ಕೆಲಸದ ನೆಪ. ಜೊತೆಗೆ ಹೂಳಬೇಕಾದ ಪದ್ಧತಿ ಬಿಟ್ಟು ತನ್ನಪ್ಪನ ಹೆಣವನ್ನು ಸುಡುತ್ತಾನೆ. ಅಪ್ಪ ಇವನಿಗೆ ಕೇಳಲಿ ಎನ್ನುವಂತೆ ಮೊಮ್ಮಗನ ಹತ್ತಿರ ಮಾತನಾಡುವಾಗ ಹೇಳುತ್ತಿರುವ ಮಾತುಗಳು ಬದುಕಿನ ದೃಷ್ಟಿಕೋನವನ್ನೇ ತೆರೆದಿಡುವಂತಿವೆ; ‘ನಾವು ಸತ್ರೆ ದೇವರುತಕ ಹೋಗಾಕಿಲ್ಲ. ಮರ ಆಗ್ತೀವಿ ಗಿಡ ಆಗ್ತೀವಿ, ವುಳ ಆಗ್ತೀವಿ, ಗರಿಕುಲ್ಲು ಆಗ್ತೀವಿ, ಒಟ್ನಲ್ಲಿ ಬದುಕ್ತೀವಿ... ನಾನು ಸತ್ರೆ ನಿಮ್ಮಪ್ಪನು ನನ್ನೆಣಾನ ಊರಾಕಿನ ಮಾಮಿಡಿ ತೊಟ್ಟಾಕೆ ವೂಳ್ತಾನೆ, ನೀನು ಅಲ್ಗೆ ಬಂದಾಗಲ್ಲೆಲ್ಲ ನಿನ್ ಜತೇಕೆ ಮಾತಾಡಿಸ್ತೀನಿ, ಅಣ್ಣು ಕೊಡ್ತೀನಿ’ ಅಂತ. ಆದರೆ ತಲೆಮಾರುಗಳು ಬೀಸುಗಾಲಿನಲ್ಲಿ ಆ ಭಾವನೆಗಳನ್ನು ದಾಟಿ ಹೀಗಿ, ಅತ್ತ ಸಾವಿನ ಘನತೆಯೂ ಇಲ್ಲ, ಬದುಕಿನ ಘನತೆಯೂ ಇಲ್ಲ ಎಂಬಂತಾಗುತ್ತದೆ.

ಚೀಮನಹಳ್ಳಿಯವರ ಈ ಸಂಕಲನದ ಕಥೆಗಳಲ್ಲಿ ಎರಡು ತಲೆಮಾರುಗಳಿರುವಂತೆ ಎರಡು ಲೋಕಗಳಿವೆ. ಒಂದು ಸೀಮೆಯ, ಗ್ರಾಮೀಣ ಲೋಕ. ಇಲ್ಲಿ ಬಡತನ, ಗ್ರಾಮೀಣ ಪ್ರದೇಶಕ್ಕೆ ಸದಾ ಕಾಡುವಂಥ ಶೋಷಣೆಗಳು, ಭೂಮಾಲೀಕರು, ಶ್ರೀಮಂತರು ಇರುವಂತಹದ್ದು. ಇನ್ನೊಂದು ಜನನಿಬಿಡವಾದ ಅರಣ್ಯವಾಗಿರುವ ನಗರಲೋಕ. ಇಲ್ಲಿಯ ಕ್ರೌರ್ಯ ಜನರ ಶೋಷಣೆ ಎಲ್ಲಾ ಒಳಮುಖಿಯಾಗಿರುವಂಥವು. ನೇರವಾಗಿ ಕಾಣದೇ ಥಳಕಿನಲ್ಲಿ ಮರೆಸಿಕೊಂಡಿರುವಂಥವು.




ಮಹಾತ್ಮೆ
ಲೇ: ಚೀಮನಹಳ್ಳಿ ರಮೇಶಬಾಬು
ಪು: 132, ಬೆಲೆ: 150
ಪ್ರ: ಅನಿಮಾ ಪುಸ್ತಕ, ಬೆಂಗಳೂರು
ಮೊ: 98458 75423

ಈ ಎರಡೂ ಸೀಮೆಗಳು ಒಂದಕ್ಕೊಂದು ತಾಕಿ, ಗಾಯಗೊಂಡು ರಸಿಕೆಯಾಡುತ್ತಲೇ ಇರುತ್ತವೆ. ಈ ಎರಡೂ ಲೋಕಗಳನ್ನು ಬೆಸೆಯಲಾಗದು. ಏಕೆಂದರೆ ಎರಡರ ಭಾವಲೋಕಗಳು ವಿಭಿನ್ನವಾಗಿವೆ. ಇಲ್ಲಿನ ಭಾಷೆಗೆ ಅಲ್ಲಿನ ಭಾಷೆ, ಭಾವ ದಕ್ಕದಂತಾಗಿದೆ. ಎರಡೂ ಲೋಕಗಳನ್ನು ಬಿಡಿಸಿ ಬಿಡಿಸಿ ನೋಡುವ ದೃಷ್ಟಿಯಿಂದ ಹಳ್ಳಿಯಾಗಲೀ ನಗರವಾಗಲೀ ರಮ್ಯವಾಗಿ ಭಾವಿಸಿಕೊಳ್ಳುವಂತಹ ಜಾಗಗಳಾಗಿ ಉಳಿಯುವುದಿಲ್ಲ. ಅಲ್ಲಿ ಉಳಿದುಕೊಳ್ಳುವುದು ಹೆಣಗಿ, ಹೇಗಾದರೂ ಬದುಕಬೇಕೆಂಬ ಹಂಬಲವೇ.

ಇಲ್ಲಿ ನಗರ ಎನ್ನುವುದು ಅತೀವವಾದ ಸ್ಪರ್ಧೆಯನ್ನು ಒಡ್ಡುವ ಜಾಗ. ಡಾರ್ವಿನ್ ಹೇಳುವ ಅತಿಯಾದ ಜೀವಸಂಕುಲವು ಉಂಟು ಮಾಡುವ ಉಳಿವಿನ ಹೋರಾಟದ ಥರ ಇಲ್ಲಿನ ಸ್ಪರ್ಧಾತ್ಮಕತೆ